## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 901 |
| ಮಾನ್ಯ ಸದಸ್ಯರು | ಶ್ರೀ. ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.12.2018 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಅಂತರ ರಾಷ್ಟ್ರೀಯ ಆರೋಗ್ಯ ಪ್ರವಾಸೋದ್ಯಮ ಕಾಂಗ್ರೆಸ್ ಸಮ್ಮೇಳನ್ನಕ್ಕೆ ರೂ. 20 ಲಕ್ಷಗಳ ಅನುದಾನ ಬಿಡುಗಡೆಗೆ ಸೂಚ್ಯಾದೇಶ ನೀಡಿರುವುದು ನಿಜವೇ; | ಹೌದು |
| ಆ) | ಸಂಬಂಧ ಕಡತ ಸಂಖ್ಯೆ ಆಕುಕ 01 ಸಿಜಿಇ 2018 ಯಾವ ಹಂತದಲ್ಲಿವೆ; | 2017ರ ಅಂತರ ರಾಷ್ಟ್ರೀಯ ಆರೋಗ್ಯ ಪ್ರವಾಸೋದ್ಯಮ ಕಾಂಗ್ರೆಸ್ ಸಮ್ಮೇಳನಕ್ಕಾಗಿ ರೂ. 20.00 ಲಕ್ಷಗಳನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನಿಂದ ಭರಿಸಲು ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುವುದಿಲ್ಲ. ಅವಶ್ಯವಿರುವ ಅನುದಾನವನ್ನು ಮಾತ್ರ ಟ್ರಸ್ಟ್ ನಿಂದ ಭರಿಸಲು ಹಿಂಬರಹ ನೀಡಿದೆ. ಈಗಾಗಲೇ ರೂ. 2.00 ಲಕ್ಷಗಳನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನಿಂದ ಬಿಡುಗಡೆ ಮಾಡಲಾಗಿದೆ. ಸದರಿ ಸಮ್ಮೇಳನವು 2017ರ ಮಾರ್ಚ್‌ನಲ್ಲೇ ಮುಕ್ತಾಯವಾಗಿರುವುದರಿಂದ ಸದರಿ ಅನುದಾನವನ್ನು ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ) | ಆರ್ಥಿಕ ಇಲಾಖೆ ಸದರಿ ಹಣವನ್ನು ಆರೋಗ್ಯ ಇಲಾಖೆ ಅಥವಾ ಸುವರ್ಣ ಆರೋಗ್ಯ ಟ್ರಸ್ಟ್‌ನಿಂದ ನೀಡಲು ಅನುಮತಿ ನೀಡಿರುವುದು ನಿಜವೇ; (ವಿವರವಾದ ಮಾಹಿತಿ ನೀಡುವುದು) | |
| ಈ) | ಸುವರ್ಣ ಆರೋಗ್ಯ ಟ್ರಸ್ಟ್‌ನಲ್ಲಿ ಅನುದಾನದ ಲಭ್ಯತೆ ಇಲ್ಲವಾದಲ್ಲಿ ಹೆಚ್ಚುವರಿ ಅನುದಾನ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕಳುಹಿಸಲು ಇರುವ ತೊಡಕುಗಳೇನು? | |
| ಉ) | ಅನುದಾನ ಕೋರಿ ಪ್ರಸ್ತಾವನೆ ಬಂದಲ್ಲಿ ಹಣ ಬಿಡುಗಡೆಗೊಳಿಸುವುದಾಗಿ ಆರ್ಥಿಕ ಇಲಾಖೆಯವರು ತಿಳಿಸಿದು, ಯಾವ ಕಾಲ ಮಿತಿಯೊಳಗೆ ಈ ಅನುದಾನವನ್ನು ಪ್ರಯೋಜಿತ ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು? | ಉದ್ಭವಿಸುವುದಿಲ್ಲ. |

( ಶಿವಾನಂದ ಎಸ್ ಪಾಟೀಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು